## ನಿಮ್ಮೊಡನೆ

# ಮಹಿಳಾ ಮೀಸಲು ಜಾರಿಯಾಗಲಿ

ಪಂಚಾಯತ್ ರಾಜ್‌ನಲ್ಲಿ ಮಹಿಳಾ ಮೀಸಲಾತಿ ಘೋಷಿಸಿದ ಮೊದಲ ರಾಜ್ಯ ನಮ್ಮದು. ಆದಾಗಿ ಹೆಂಡತಿಯರ ಹೆಸರಿನಲ್ಲಿ ಗಂಡಸರು ಸಭೆಗೆ ಬರ್ತಾರೆ, ಅಧಿಕಾರ ನಡೆಸುತ್ತಾರೆ ಎಂಬ ವರದಿಗಳಿಂದ ಆರಂಭಿಸಿ, ಇದೀಗ ಸ್ವಾವಲಂಬಿ ಮಹಿಳೆಯರು ತಮ್ಮ ಅಧಿಕಾರಾವಧಿಯನ್ನು ನಿಭಾಯಿಸುವ ಯಶಸ್ವಿ ಕತೆಗಳೂ ಬರುತ್ತಿವೆ. ಅವಕಾಶ ನೀಡಿದರೆ ಅಧಿಕಾರದ ಸದ್ಬಳಕೆ ತೋರುವಲ್ಲಿ ತಡವಾಗದು.



ವಿಜಯ

ಈ ಬೇಸಿಗೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗಾಗಿ 16ರಿಂದ ವಿಶೇಷ ಅಧಿವೇಶನ ಕರೆಯಲಾಗಿದೆ. ಅಂತೂ ಇಂತೂ ಕುಂತಿ ಮಕ್ಕಳಿಗೆ... ಎಂಬಂತೆ 1996ರಲ್ಲಿ ಸಂವಿಧಾನದಲ್ಲಿ ಮಹಿಳಾ ಮೀಸಲಾತಿಗಾಗಿ ತಿದ್ದುಪಡಿ ಬಂದ ನಂತರ ಕೇವಲ ಚರ್ಚೆಗಳಲ್ಲಿಯೇ ಈ ಮಸೂದೆ ಕಳೆದುಹೋಗಿತ್ತು. 1992ರಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ಶೇ 33ರಷ್ಟು ಮೀಸಲಾತಿ ನೀಡಿದ ನಂತರ ಲೋಕಸಭೆ ಮತ್ತು ರಾಜ್ಯಸಭೆಗೂ ಈ ಮೀಸಲಾತಿ ವಿಸ್ತರಿಸಬೇಕು ಎಂಬ ಧ್ವನಿಗೆ ಬಲ ಬಂದಿತ್ತು.

2023ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದ ಮೇಲೆ 2026ರವರೆಗೂ ಸುಮ್ಮನಿದ್ದು ಈಗ ತರಾತುರಿಯಲ್ಲಿ ಮಸೂದೆಯ ಮಂಡನೆ ಆಗುತ್ತಿರುವುದಕ್ಕೆ ವಿಪಕ್ಷಗಳು ಅಸಮಾಧಾನ ವ್ಯಕ್ತಪಡಿಸಿವೆ. ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆಯವರು ಈ ಮಸೂದೆಯನ್ನು ಮಂಡಿಸಲಿ. ದೂರದೃಷ್ಟಿತ್ವ ಇದ್ದರೆ ಈಗ ಮಂಡಿಸುವುದು ನ್ಯಾಯೋಚಿತವಾಗಿದೆ. ಐದು ರಾಜ್ಯಗಳ ಚುನಾವಣೆಯ ಸಂದರ್ಭವನ್ನು ಆಯ್ಕೆ ಮಾಡಿಕೊಂಡಿರುವುದು ಆಡಳಿತ ಪಕ್ಷದ ಹುನ್ನಾರವಾಗಿದೆ ಎಂದು ಟೀಕಿಸಿದ್ದಾರೆ. ಆದರೆ ಇದೊಂದು ಅತಿ ಮಹತ್ವದ ನಿರ್ಧಾರವಾಗಿರುವುದರಿಂದ ಅವರೂ ಸಹಮತ ಸೂಚಿಸಿದ್ದಾರೆ.

ಇದೀಗ ಕ್ಷೇತ್ರಗಳ ಮರುವಿಂಗಡಣೆ ಹಾಗೂ ಮಹಿಳಾ ಮೀಸಲಾತಿಯದ್ದು ಸೇರಿಸಿ, ಒಟ್ಟು ಸ್ಥಾನಗಳನ್ನು ಹೆಚ್ಚಿಸಬೇಕು ಎಂಬುದೂ ಚರ್ಚೆಗೆ ಬರಲಿದೆ. ಇವೆರಡೂ ಮಸೂದೆಗಳು ಮಂಡಿಸಿ, ಸ್ವೀಕೃತವಾದರೆ ಮುಂದಿನ ಚುನಾವಣೆಯಲ್ಲಿ ನಾರಿಶಕ್ತಿ ಬಹುಸ್ಪಷ್ಟವಾಗಿ ಕಂಡುಬರುತ್ತದೆ. ಮಹಿಳೆಯರು ಅಧಿಕಾರಕ್ಕೆ ಬಂದರೆ ಬೆಳವಣಿಗೆಯಲ್ಲಿ ಹೆಣ್ನೋಟದ ಮಹತ್ವ ಅರಿವಾಗುತ್ತದೆ. ನಾರಿ ನೋಟ (Women view) ಇದ್ದಲ್ಲಿ ವಿಭಿನ್ನವಾದ ಮತ್ತು ಸಮಗ್ರವಾದ ಅಭಿವೃದ್ಧಿಯ ನೋಟ ಸಿಗುತ್ತದೆ ಎಂಬುದು ಎಲ್ಲರ ಮಹತ್ವಾಕಾಂಕ್ಷೆಯಾಗಿದೆ.

ಗ್ರಾಮಪಂಚಾಯ್ತಿಗಳಲ್ಲಿ ಮಹಿಳಾ ಮೀಸಲಾತಿ ಬಂದ ನಂತರದ ವ್ಯತ್ಯಾಸವನ್ನು ಅಧ್ಯಯನ ಮಾಡಿದರೆ ಸಾಕಷ್ಟು ಯಶಸ್ವೀ ಕಥನಗಳು ಸಿಗುತ್ತವೆ. ಪಂಚಾಯ್ತಿಯಿಂದ ಸಂಸತ್‌ವರೆಗೆ ಸಾಗುವ ಮಹಿಳೆಯರು ಹೊಸ ಇತಿಹಾಸವನ್ನೇ ಸೃಷ್ಟಿಸುತ್ತಾರೆ.

ಮೊದಮೊದಲಿಗೆ ಪಂಚಾಯ್ತಿ ಸದಸ್ಯೆಯರ ಬದಲಿಗೆ ಅವರ ಮನೆಯ ಪುರುಷರು ಪಂಚಾಯ್ತಿ ಸಭೆಗೆ ಹಾಜರಾಗುತ್ತಿದ್ದರು. ಅವರೇ ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಸಹಿ ಹಾಕಲು, ಹೆಬ್ಬೆರಳೊತ್ತಲು ಮಾತ್ರ ಮಹಿಳೆಯರು ಸೀಮಿತರಾಗಿದ್ದರು. ಸಾಕ್ಷರತಾ ಅಭಿಯಾನ ಯಶಸ್ವಿಯಾದ ನಂತರ ಮಹಿಳೆಯರು ಸ್ವಾವಲಂಬಿಗಳಾದರು. ಸ್ವನಿರ್ಧಾರ ಮತ್ತು ಪಾಲ್ಗೊಳ್ಳುವಿಕೆಯ ಬಗ್ಗೆ ಪಂಚಾಯತ್ ರಾಜ್ ಇಲಾಖೆ ಸಾಕಷ್ಟು ತರಬೇತಿಗಳನ್ನು ನೀಡಿ, ಸಂಪೂರ್ಣವಾಗಿ ಅಧಿಕಾರ ಚಲಾಯಿಸುವಷ್ಟು ಗಟ್ಟಿಗೊಳಿಸಿದರು. ಆ ನಂತರದ ನಾರಿಶಕ್ತಿ ಎಲ್ಲಿಯೂ, ಯಾವುದರಲ್ಲಿಯೂ ಹಿಂದೆ ಬೀಳಲಿಲ್ಲ.

‘ನನ್ನ ಪರವಾಗಿ ನನ್ನ ಗಂಡನೇ ಸಭೆಗೆ ಬರುತ್ತಾನೆ’ ಎಂದು ಹೇಳಿದ ಮಹಿಳೆಯರು ತಾವೇ ಸಭೆಗೆ ಬಂದು ಕೂರುವಂತೆ, ಚರ್ಚಿಸುವಂತೆ ಆಯಿತು. ಅರಿವೆಂಬುದು ಬಿಡುಗಡೆ ಎಂದು ಬದಲಾಗಿದ್ದೇ ಅಲ್ಲಿ. ಪುರುಷಾಳ್ವಿಕೆಯ ದಬ್ಬಾಳಿಕೆಯನ್ನು ಕಣ್ಣೋಟದಲ್ಲಿಯೇ ಎದುರಿಸಿ, ಸಭೆಗಳಿಗೆ ಬರತೊಡಗಿದರು. ಇದೀಗ ಅಧಿಕಾರಯುತ ಮಹಿಳೆಯರನ್ನು ಗೌರವದಿಂದ ಕಾಣುವಂತಾಗಿದೆ.

ಸಮಾಜದಲ್ಲಿ ಆಳವಾಗಿ ಬೇರೂರಿರುವ ಗಂಡಾಳ್ವಿಕೆಯ ಮೌಲ್ಯಗಳು ಪುರುಷರಿಗಿಂತಲೂ ಹೆಣ್ಣುಮಕ್ಕಳಲ್ಲಿಯೇ ಹೆಚ್ಚು ತಳ ಊರಿವೆ. ಅವುಗಳಿಗೆ ಒಳಪಟ್ಟರೆ ಹೆಚ್ಚು ಸುರಕ್ಷಿತ ಮತ್ತು ಅನುಕೂಲಕರ ಎಂಬ ನಂಬಿಕೆಯನ್ನು ಸುತ್ತಲಿನ ಸಮಾಜ ಮಹಿಳೆಯರಲ್ಲಿ ಬೇರೂರುವಂತೆ ಮಾಡಿದೆ. ಈ ನಂಬಿಕೆಯನ್ನು ಭಂಗುರಗೊಳಿಸುವುದು ಸರಳವಾಗಿರಲಿಲ್ಲ.

ಸಾಮಾಜಿಕ ಮೌಲ್ಯಗಳ ಸಂಘರ್ಷದೊಂದಿಗೆ ಒಳಿತೆಂದರೇನು? ಸ್ವಾತಂತ್ರ್ಯವೆಂದರೇನು? ಇವುಗಳನ್ನು ನಿಕಷಕ್ಕೆ ಒಡ್ಡಿದ ನಂತರವೇ ಸ್ತ್ರೀ ಸ್ವಾತಂತ್ರ್ಯವೆಂಬುದು ಪರಸ್ಪರ ಗೌರವಿಸುವುದೇ ಆಗಿದೆ. ಯಾರ ದಬ್ಬಾಳಿಕೆಗೆ ಅಥವಾ ಆಳ್ವಿಕೆಗೆ ಒಳಪಡದಿರುವುದೇ ಆಗಿದೆ ಎಂಬುದನ್ನು ಅರಿತ ನಂತರ ಎಲ್ಲವೂ ಸುಸ್ಪಷ್ಟವಾಗಿ ಕಾಣತೊಡಗಿದೆ.

ಇನ್ನು ಆಡಳಿತದ ದುರುಪಯೋಗವಾಗುವುದು, ಮಹಿಳೆಯರಿಗೆ ಮೀಸಲಾತಿ ನೀಡಿದರೆ ಅನರ್ಹರು ಆಡಳಿತಕ್ಕೆ ಬರಬಹುದು ಎಂಬಂಥ ಹೆಳೆಗಳನ್ನು ನಿವಾಳಿಸಿ ಎಸೆಯಬೇಕಿದೆ. ಈ ಮೀಸಲಾತಿ ದೊರೆತರೆ ಕಟ್ಟೆಪುರಾಣಗಳಲ್ಲಿ ಆಗುವ ರಾಜಕೀಯ ಚರ್ಚೆ ಕಿಟ್ಟಿಪಾರ್ಟಿಗಳಿಗೂ ಹರಡುವುದು. ದೇಶದ ಆಡಳಿತ ನಿಭಾಯಿಸುವ, ಆಳುವ ಅಧಿಕಾರ ದೊರೆತರೆ ಹೊಸದೊಂದು ಅಧ್ಯಾಯವೇ ಆರಂಭವಾಗುವುದು.

ಇದು ತರಾತುರಿಯಲ್ಲಾದರೂ ಆಗಲಿ, ರಾಜಕೀಯ ಲಾಭದ ಲೆಕ್ಕಾಚಾರದಲ್ಲಿಯಾದರೂ ಆಗಲಿ, ಹೇಗಾದರೂ ಸರಿಯೇ ಒಟ್ಟಿನಲ್ಲಿ ಆಗಬೇಕು. ಇದು ಸದ್ಯದ ಲಾಭಕ್ಕೆ ಸಹಾಯ ಆಗುವುದೋ ಇಲ್ಲವೋ, ಆದರೆ ದೇಶದ ಭವಿಷ್ಯ ನಿರ್ಮಾಣದಲ್ಲಿ ಮಹಿಳೆಯರ ಪಾತ್ರವನ್ನು ಗುರುತರವಾಗಿ ನಿಭಾಯಿಸುವತ್ತ ದೊಡ್ಡ ಹೆಜ್ಜೆಯಾಗಲಿದೆ. ಮಸೂದೆ ಪಾಸಾಗಬೇಕು ಅಷ್ಟೆ.

■ ರಶ್ಮಿ ಎಸ್